**MARCH 28, 2024**

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ–ಪ್ರದೇಶ ಸಮಾಚಾರ**

<><><>

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ಕರ್ನಾಟಕ ಸೇರಿದಂತೆ 12 ರಾಜ್ಯಗಳಲ್ಲಿ, 2ನೇ ಹಂತದ ಲೋಕಸಭಾ ಚುನಾವಣೆಗೆ, ಇಂದು ಅಧಿಸೂಚನೆ ಪ್ರಕಟ.
- ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ, ಮತದಾರರ ಜಾಗೃತಿ ಆಂದೋಲನ ಚುರುಕು.
- ರಾಜ್ಯದ ನಲವತ್ತು ಭಾಷೆಗಳ ಪೈಕಿ, ನಾಲ್ಕು ಭಾಷೆಗಳು ಕಣ್ಮರೆ – ಪ್ರೊಫೆಸರ್ ಎ. ಮುರಿಗೆಪ್ಪ.
- ‘ರಂಗಭೂಮಿ ಮತ್ತು ಶಾಂತಿಯ ಸಂಸ್ಕೃತಿ’ ಧ್ಯೇಯದೊಂದಿಗೆ, ರಂಗಭೂಮಿ ವಿಶ್ವ ದಿನಾಚರಣೆ ಯಶಸ್ವಿ.

<><><>

**ಈಗ ವಾರ್ತೆಗಳ ವಿವರ**

<><><>

ದೇಶದ 13 ರಾಜ್ಯಗಳ, ಒಟ್ಟು 89 ಲೋಕಸಭಾ ಕ್ಷೇತ್ರಗಳಿಗೆ ಇಂದು ಅಧಿಸೂಚನೆ ಹೊರಬೀಳಲಿದೆ. ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪೈಕಿ 14 ಕ್ಷೇತ್ರಗಳಿಗೆ ಅಧಿಸೂಚನೆ ಅನ್ವಯವಾಗಲಿದೆ. ಇಂದಿನಿಂದಲೇ ನಾಮಪತ್ರ ಸಲ್ಲಿಸಲು ಅವಕಾಶವಿದೆ. ಏಪ್ರಿಲ್ 4ರ ವರೆಗೆ ನಾಮಪತ್ರ ಸಲ್ಲಿಸಬಹುದು. 5 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರಗಳ ವಾಪಸ್ಸಾತಿಗೆ ಏಪ್ರಿಲ್ 8 ಕೊನೆಯ ದಿನ. ಏಪ್ರಿಲ್ 26 ರಂದು ಮತದಾನ ನಡೆಯಲಿದೆ.

<><><>

ಲೋಕಸಭೆ ಚುನಾವಣೆಯ, ಮೊದಲ ಹಂತದ, ನಾಮಪತ್ರ ಸಲ್ಲಿಸಲು ನಿನ್ನೆ ಕೊನೆಯ ದಿನವಾಗಿತ್ತು. ಇಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಇದೇ 30 ನಾಮಪತ್ರ ಹಿಂಪಡೆಯಲು ಕಡೆಯ ದಿನ. ಏಪ್ರಿಲ್ 19 ರಂದು 17 ರಾಜ್ಯಗಳು ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿನ 102 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಚುನಾವಣೆ ನಡೆಯಲಿದೆ. ಆ ಪೈಕಿ ಕರ್ನಾಟಕದ 14 ಕ್ಷೇತ್ರಗಳು ಸೇರ್ಪಡೆಯಾಗಿವೆ.

<><><>

ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ, ಚುನಾವಣಾ ಪೂರ್ವ ಸಿದ್ಧತೆಗಳ ಕುರಿತು, ಆಯ್ದ ಕೆಲ ಜಿಲ್ಲಾಡಳಿತಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಈಗ ಮಾಹಿತಿ.

<><><>

ವಿಧಾನಸೌಧದ ಮುಂಭಾಗದಲ್ಲಿ, ವಿಶೇ ' ಚೇತನ ಮತದಾರರ ಜಾಗೃತಿ ಜಾಥಾಕ್ಕೆ, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಚಾಲನೆ ನೀಡಿದರು. ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಅಪರ ಮುಖ್ಯ ಚುನಾವಣಾಧಿಕಾರಿ ಕೂರ್ಮಾ ರಾವ್ ಪಾಲ್ಗೊಂಡಿದ್ದರು.

<><><>

ಮಾಜಿ ಪ್ರಧಾನಮಂತ್ರಿ ಹಾಗೂ ಜೆ.ಡಿ.ಎಸ್. ರಾಷ್ಟ್ರೀಯ ಅಧ್ಯಕ್ಷ ಎಚ್. ಡಿ ದೇವೇಗೌಡ ಅವರು, ಹಾಸನ ಲೋಕಸಭಾ ಕ್ಷೇತ್ರದ ಹಿರಿಸಾವೆಯಲ್ಲಿ, ಪ್ರಜ್ವಲ್ ರೇವಣ್ಣ ಪರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾದರು.

<><><>

ಚಾಮರಾಜನಗರ ಜಿಲ್ಲೆಯಲ್ಲಿ, ಯುವ ಮತದಾರರನ್ನು ಮತಗಟ್ಟೆಗಳಿಗೆ ಕರೆತರಲು, ಮದುವೆಯ ಆಹ್ವಾನ ಪತ್ರದ ಮಾದರಿಯಲ್ಲಿ ತಯಾರಿಸಿದ, 'ಮತದಾನದ ಮಮತೆಯ ಕರೆಯೋಲೆ' ಆಮಂತ್ರಣ ಪತ್ರವನ್ನು, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಉದ್ಘಾಟಿಸಿದರು.

<><><>

ಹಾವೇರಿ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯ, ಗದಗ ತಾಲೂಕಿನ ಹಲವಾರು ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಅವರು ಪ್ರಚಾರ ಕೈಗೊಂಡು, ಮತಯಾಚಿಸಿದರು.

<><><>

ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆ ಕೆ.ಎಂ.ಗಾಯಿತ್ರಿ ಅವರು, ತಾಲೂಕು ಆಡಳಿತ ಸೌಧದ ಆವರಣದಲ್ಲಿ, ಆಯೋಜಿಸಿದ್ದ ಮತದಾರ ವಾಗ್ದಾನ 'ಹಸ್ತಾಕ್ಷರ ಸಂಗ್ರಹ ಅಭಿಯಾನಕ್ಕೆ' ಸಹಿ ಹಾಕಿ, ಚಾಲನೆ ನೀಡಿದರು.

<><><>

ಡೊಳ್ಳು ಕುಣಿತ, ತಮಟೆ ವಾದ್ಯ, ನೃತ್ಯ, ಬೊಂಬೆಗಳ ಪ್ರದರ್ಶನ ಹೀಗೆ ವಿವಿಧ ಕಲಾ ತಂಡಗಳ ಮೂಲಕ, ಕಡ್ಡಾಯ ಮತದಾನದ ಕುರಿತ, ಜನ ಜಾಗ್ರತಿ ಕಾಲ್ನಡಿಗೆ ಜಾಥಾಕ್ಕೆ, ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಚಾಲನೆ ನೀಡಿದರು.

<><><>

ಯಾದಗಿರಿ ಜಿಲ್ಲೆಯ ಸುರಪುರ ವಿಧಾನಸಭಾ ಕ್ಷೇತ್ರದ ವಿವಿಧ ಮತಗಟ್ಟೆ ಮತ್ತು ತನಿಖಾ ಠಾಣೆಗಳಿಗೆ ಯಾದಗಿರಿ ಜಿಲ್ಲಾಧಿಕಾರಿ ಡಾಕ್ಟರ್ ಬಿ.ಸುಶೀಲಾ ಮತ್ತು ಪೊಲೀಸ್ ವರಿ ಾಧಿಕಾರಿ ಸಂಗೀತಾ, ಭೇಟಿ ನೀಡಿ ಪರಿಶೀಲಿಸಿದರು.

<><><>

ವಿಶೇ ' ಚೇತನರಿಗೆ ಮತಗಟ್ಟೆಗಳಲ್ಲಿ ಅಗತ್ಯ ಅನುಕೂಲಗಳನ್ನು ಕಲ್ಪಿಸಲಾಗಿದೆ ಎಂದು, ಬೆಂಗಳೂರು ನಗರ ಜಿಲ್ಲಾಧಿಕಾರಿ ತು ಾರ್ ಗಿರಿನಾಥ್ ತಿಳಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿಯ ಮಾರಿಕಾಂಬಾ ದೇವಿಯ ಜಾತ್ರೆಯಲ್ಲಿ, ಮತದಾನ ಜಾಗೃತಿ ಅಂಗವಾಗಿ 'ಗೊಂಬೆಯಾಟ' ಕಾರ್ಯಕ್ರಮ ಗಮನ ಸೆಳೆಯಿತು.

<><><>

ವಿಜಯನಗರ ಜಿಲ್ಲೆ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಒಳಗೊಂಡ, ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, ಸಾವಿರದ 946 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

<><><>

ಹಿಂದಿನ ಸಾರ್ವತ್ರಿಕ ಚುನಾವಣೆಯಲ್ಲಿ, ಧಾರವಾಡ ಜಿಲ್ಲೆಯ 9 ಮತಗಟ್ಟೆಗಳಲ್ಲಿ ಕಡಿಮೆ ಮತದಾನವಾಗಿದೆ. ಶೇಕಡಾ 20 ಕ್ಕಿಂತ ಕಡಿಮೆ ಮತದಾನವಾದ, 8 ಮತಗಟ್ಟೆಗಳನ್ನು ಗುರುತಿಸಲಾಗಿದ್ದು, ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ – ಸ್ವೀಪ್ ಚಟುವಟಿಕೆ ಚುರುಕು ಗೊಳಿಸಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸ್ವರೂಪಾ ಟಿ.ಕೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸ್ವರೂಪಾ ಟಿ.ಕೆ ಧ್ವನಿ 58 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮುಕ್ತ, ಪಾರದರ್ಶಕ ಮತ್ತು ನ್ಯಾಯ ಸಮ್ಮತ ಚುನಾವಣೆ ಖಾತ್ರಿ ಪಡಿಸುವ ಉದ್ದೇಶದಿಂದ, ಕೇಂದ್ರ ಚುನಾವಣಾ ಆಯೋಗ, ಅಕ್ರಮಗಳ ಪತ್ತೆಗೆ ಹಾಗೂ ತಡೆಗೆ ಸಿ–ವಿಜಲ್ ಅಪ್ಲಿಕೇಶನ್ ಬಿಡುಗಡೆ ಮಾಡಿದೆ.

ಸಾರ್ವಜನಿಕರು ಸಿ–ವಿಜಿಲ್ ಆಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ನೀತಿ ಸಂಹಿತೆ ಉಲ್ಲಂಘನೆ ಕುರಿತ ದೂರುಗಳನ್ನು ದಾಖಲಿಸಬಹುದು ಎಂದು, ಹಾವೇರಿ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ಧ್ವನಿ 48 ಸೆಕೆಂದುಗಳು

<><><>

ದೇಶದ 160 ಭಾಷೆಗಳ ಪೈಕಿ, 60 ಭಾಷೆಗಳು ಅಳಿವಿನಂಚಿನಲ್ಲಿವೆ. ಕರ್ನಾಟಕದ ನಲವತ್ತು ಭಾಷೆಗಳಲ್ಲಿ ನಾಲ್ಕು ಭಾಷೆಗಳು ಈಗಾಗಲೇ ಕಣ್ಮರೆಯಾಗಿವೆ ಎಂದು, ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ಭಾಷಾತಜ್ಞ ಪ್ರೊಫೆಸರ್ ಎ. ಮುರಿಗೆಪ್ಪ ತಿಳಿಸಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಮಾನಸೋಲ್ಲಾಸ ಸಭಾಭವನದಲ್ಲಿ ಹೊಸ ದಿಲ್ಲಿಯ ಭಾರತೀಯ ಭಾ ಾ ಸಮಿತಿ ಆಯೋಜಿಸಿದ್ದ, ರಾಷ್ಟ್ರೀಯ ಭಾ ಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಮಾತೃ ಭಾ ೆಯ ಜೊತೆಗೆ, ಇನ್ನೊಂದು ಭಾ ೆಯನ್ನೂ ಗೌರವಿಸುವ ಮನೋಭಾವ ಎಲ್ಲರಲ್ಲೂ ಬೆಳೆಯಬೇಕು ಎಂದು ಡಾಕ್ಟರ್ ಮುರಿಗೆಪ್ಪ ಆಶಿಸಿದರು.

<><><>

ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಕನ್ನಡದ ಹಿರಿಯ ವಿದ್ವಾಂಸ ಪ್ರೊಫೆಸರ್ ಗುರುಲಿಂಗ ಕಾಪಸೆ ಧಾರವಾಡದಲ್ಲಿ ನಿನ್ನೆ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

<><><>

ಪುದುಚೇರಿಯ ಶ್ರೀ ಮಾತಾ ಹಾಗೂ ಶ್ರೀ ಅರವಿಂದರ ಅನುಯಾಯಿಯಾಗಿದ್ದ ಕಾಪಸೆ ಅವರ ಅಂತಿಮ ಇಚ್ಛೆಯಂತೆ, ಬೈಲಹೊಂಗಲದ ಡಾಕ್ಟರ್ ರಾಮಣ್ಣವರ ಚಾರಿಟೇಬಲ್ ಟ್ರಸ್ಟ್ ಮೂಲಕ, ಬೆಳಗಾವಿಯ ಕೆ.ಎಲ್.ಇ. ಆಯುರ್ವೇದ ಮಹಾವಿದ್ಯಾಲಯಕ್ಕೆ ದೇಹದಾನ ಮಾಡಲಾಗಿದೆ ಎಂದು, ಡಾಕ್ಟರ ಮಹಾಂತೇಶ ರಾಮಣ್ಣವರ ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಡಾಕ್ಟರ್ ಕಾಪಸೆ ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕ ಬಡವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಂಬನಿ ಮಿಡಿದಿದ್ದಾರೆ.

<><><>

ಸಚಿವ ಎಂ.ಬಿ.ಪಾಟೀಲ, ಸಚಿವ ಸಂತೋಷ ಲಾಡ ಹಾಗೂ ವಿಧಾನಸಭೆ ಪ್ರತಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ಅವರು, ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ, ಕನ್ನಡ ಸಾಹಿತ್ಯ ಲೋಕದ ಮಹತ್ವದ ಕೊಂಡಿಯೊಂದು ಕಳಚಿದಂತಾಗಿದೆ ಎಂದಿದ್ದಾರೆ.

<><><>

ನಾರ್ವೆಯ ಪ್ರಸಿದ್ಧ ನಾಟಕಕಾರ ಜಾನ್ ಫಾಸ್, 'ರಂಗಭೂಮಿ ಮತ್ತು ಶಾಂತಿಯ ಸಂಸ್ಕೃತಿ' ಎಂದು, ಈ ಬಾರಿ ವಿಶ್ವ ರಂಗಭೂಮಿ ದಿನಾಚರಣೆ ಸಂದೇಶ ನೀಡಿದ್ದಾರೆ. 1962 ರಿಂದ ರಂಗಭೂಮಿ ವಿಶ್ವ ದಿನವನ್ನು ಆಚರಿಸಲಾಗುತ್ತಿದೆ.

<><><>

ರಂಗಭೂಮಿ ಜೀವಂತಿಕೆ ಇರುವ ಕಲೆ; ಒಗ್ಗೂಡಿ ನಡೆಯುವುದನ್ನು ಕಲಿಸುತ್ತದೆ ಎಂದು ಹಿರಿಯ ರಂಗಕರ್ಮಿ ಪುರು ೋತ್ತಮ ತಲವಾಟ ಹೇಳಿದ್ದಾರೆ. ಶಿವಮೊಗ್ಗ ರಂಗಾಯಣದಲ್ಲಿ ರಂಗಭೂಮಿ ವಿಶ್ವ ದಿನದ ಪ್ರಯುಕ ಆಯೋಜಿಸಿದ್ದ, 'ರಂಗ ಚಿಂತನ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

<><><>

ದೊಡ್ಡಬಳ್ಳಾಪುರದಲ್ಲಿ ಕಲಾವಿದರ ಸಂಘದ ವತಿಯಿಂದ ನಡೆದ, ರಂಗಭೂಮಿ ದಿನಾಚರಣೆಯಲ್ಲಿ, ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿ ್ತ್ ಅಧ್ಯಕ್ಷ ಹುಲಿಕಲ್ ನಟರಾಜ್ ಮಾತನಾಡಿ, ಹಲವಾರು ಕಲೆಗಳ ಸಂಯೋಜನೆಯಿಂದ

ರೂಪುಗೊಳ್ಳುವ ರಂಗಕಲೆ, ವ್ಯಕ್ತಿಯನ್ನು ಸೃಜನಶೀಲನಾಗಿಸುತ್ತದೆ. ಕಲಾವಿದರಿಗೆ ಒಂದೇ ಧರ್ಮ ಮನುಷ್ಯತ್ವ ಎಂಬುದನ್ನು ಅಭಿವ್ಯಕ್ತಿಸುತ್ತದೆ ಎಂದರು.

<><><>

ಶಿವಮೊಗ್ಗ ರಂಗಾಯಣ, ಏಪ್ರಿಲ್ 12 ರಿಂದ ಮೇ 1ರ ವರೆಗೆ, ಸುವರ್ಣ ಸಂಸ್ಕೃತಿ ಭವನದಲ್ಲಿ, 8 ರಿಂದ 14 ವರ್ಷ ವಯೋಮಾನದ ಮಕ್ಕಳಿಗೆ, ಬೇಸಿಗೆ ಶಿಬಿರ ಆಯೋಜಿಸಿದೆ.

<><><>

ಧಾರವಾಡ ರಂಗಾಯಣ ಸಹ ಚಿಣ್ಣರ ಮೇಳವನ್ನು, ಏಪ್ರಿಲ್ 14 ರಿಂದ ಮೇ 12ರ ವರೆಗೆ ಆಯೋಜಿಸಿದೆ. 8 ರಿಂದ 14 ವರ್ಷ ವಯೋಮಾನದ ಮಕ್ಕಳು ಅರ್ಜಿ ಸಲ್ಲಿಸಬಹುದು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ತತ್ವ ಪದಗಳ ಕವಿ, ಶಿಶುನಾಳ ಶರೀಫ ಶಿವಯೋಗಿಗಳ ಆರಾಧ್ಯ ಗುರು, ಕಳಸದ ಗೋವಿಂದ ಭಟ್ಟರ 154ನೇ ಪುಣ್ಯಾರಾಧನೆ ಉತ್ಸವ, ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು ಕಳಸ ಗ್ರಾಮದಲ್ಲಿ, ಇದೇ 29ರ ವರೆಗೆ ಜರುಗಲಿದೆ.

<><><>

ಶ್ರೀ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿಯನ್ನು, ಇಂದು ಬೆಳಿಗ್ಗೆ 11 ಗಂಟೆಗೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ, ಏರ್ಪಡಿಸಲಾಗಿದೆ.

<><><>

ಹಿರಿಯ ಪತ್ರಕರ್ತ ಮೊಹರೆ ಹಣಮಂತರಾಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಇಂದು ಮಧ್ಯಾಹ್ನ 12 ಗಂಟೆಗೆ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಭಾಂಗಣದಲ್ಲಿ ನಡೆಯಲಿದೆ.

<><><>

ರಾಜ್ಯದ ಗರಿಷ್ಠ ತಾಪಮಾನ 40.6 ಡಿಗ್ರಿ ಸೆಲ್ಶಿಯೆಸ್ ಕಲಬುರಗಿಯಲ್ಲಿ ಹಾಗೂ ಕನಿಷ್ಠ ತಾಪಮಾನ 17.5 ಡಿಗ್ರಿ ಸೆಲ್ಶಿಯೆಸ್ ಚಾಮರಾಜ ನಗರದಲ್ಲಿ ದಾಖಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕರ್ನಾಟಕ ಸೇರಿದಂತೆ 12 ರಾಜ್ಯಗಳಲ್ಲಿ, 2ನೇ ಹಂತದ ಲೋಕಸಭಾ ಚುನಾವಣೆಗೆ, ಇಂದು ಅಧಿಸೂಚನೆ ಪ್ರಕಟ.
- ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ, ಮತದಾರರ ಜಾಗೃತಿ ಆಂದೋಲನ ಚುರುಕು.
- ರಾಜ್ಯದ ನಲವತ್ತು ಭಾಷೆಗಳ ಪೈಕಿ, ನಾಲ್ಕು ಭಾಷೆಗಳು ಕಣ್ಮರೆ – ಪ್ರೊಫೆಸರ್ ಎ. ಮುರಿಗೆಪ್ಪ.

- ‘ರಂಗಭೂಮಿ ಮತ್ತು ಶಾಂತಿಯ ಸಂಸ್ಕೃತಿ’ ಧ್ಯೇಯದೊಂದಿಗೆ, ರಂಗಭೂಮಿ ವಿಶ್ವ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>